ದಿನಾಂಕಃ 06-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ಆರೋಪಿ ನನಗೆ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಹಲಗೇಗೌಡನಕೊಪ್ಪಲು ಗ್ರಾಮದಲ್ಲಿ ವಾಸವಾಗಿರುತ್ತೇನೆ. ಜವರೇಗೌಡ ರವರ ಮಗ ಕಾರ್ತಿಕ ಎಂಬುವವರು ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಆರೋಪಿ ಏನು ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣ ನೀಡಿದ ಸಮಯದಲ್ಲಿ ಆರೋಪಿ ಕೃಷಿ ಇಲಾಖೆಯಲ್ಲಿ ಬೀಜಗಳನ್ನು ಮಾರಾಟ ಮಾಡುತ್ತಿದ್ದರು. ನಾನು ವ್ಯವಸಾಯ ಮಾಡುತ್ತೇನೆ. ನನಗೆ 2 ಎಕರೆ 20 ಗುಂಟೆ ವ್ಯವಸಾಯ ಜಮೀನು ಇರುತ್ತದೆ. ಸದರಿ ಜಮೀನು ಖುಷ್ಕಿ ಜಮೀನು ಆಗಿರುತ್ತದೆ. ಸದರಿ ಜಮೀನಿನಲ್ಲಿ ಹೊಗೇಸೊಪ್ಪು ಮತ್ತು ಶುಂಠಿ ಬೆಳೆಯುತ್ತೇವೆ. ಸದರಿ ಜಮೀನು ಇದೆ ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ವಾರ್ಷಿಕವಾಗಿ ಹೊಗೇಸೊಪ್ಪು ಬೆಳೆಯಿಂದ ಸಾಮಾನ್ಯವಾಗಿ ರೂ. 1,00,000/- ಆದಾಯ ಬರುತ್ತದೆ. ಹೊಗೇಸೊಪ್ಪು ಬೆಳೆಯಲು ವಾರ್ಷಿಕವಾಗಿ ರೂ. 40,000/- ಖರ್ಚು ಬರುತ್ತದೆ.

2) ನಮ್ಮ ಕುಟುಂಬದಲ್ಲಿ 5 ಜನ ವಾಸವಾಗಿರುತ್ತವೆ. ನಮ್ಮ ಕುಟುಂಬದ ನಿರ್ವಹಣೆ ನಾನೇ ಮಾಡುತ್ತೇನೆ. ನಮ್ಮ ಕುಟುಂಬದ ಖರ್ಚಿಗಾಗಿ ರೂ.10,000/- ಖರ್ಚು ಬರುತ್ತದೆ. ಆರೋಪಿ ನನ್ನ ಸಹಪಾಠಿ ಆಗಿರುತ್ತಾರೆ. ಕಾರ್ತಿಕ ಸಹ ನನ್ನ ಸ್ನೇಹಿತ ಎಂದರೆ ಸರಿಯಲ್ಲ. ಆರೋಪಿ ನನ್ನ ಬಳಿ ಒಂದು ಸಲ ಹಣಕಾಸಿನ ವ್ಯವಹಾರ ಮಾಡಿರುತ್ತಾರೆ. ಆರೋಪಿ ಜನವರಿ 2018 ನೇ ಸಾಲಿನಲ್ಲಿ ಹಣ ಬೇಕು ಎಂದು ಕೇಳಿರುತ್ತಾರೆ. ಆರೋಪಿ ಸಾಲ ತೀರಿಸುವ ಸಲುವಾಗಿ ಹಣ ಕೇಳಿರುತ್ತಾರೆ. ಜನವರಿಯಲ್ಲಿ ಹಣ ಕೇಳಿದ್ದಾರೆ ಎಂದು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿಗೆ ಮಾರ್ಚ್ 2018 ರಲ್ಲಿ ಹಣ ನೀಡಿರುತ್ತೇನೆ ಆದರೆ, ನಿರ್ದಿಷ್ಟವಾದ ದಿನಾಂಕ

ಗೊತ್ತಿರುವುದಿಲ್ಲ ಮತ್ತು ಸದರಿ ದಿನಾಂಕವನ್ನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಆರೋಪಿ ನಾನು ನೀಡಿರುವ ಹಣದ ಭದ್ರತೆಗಾಗಿ ನಿಪಿ-01 ಚೆಕ್ಕು ನೀಡಿರುತ್ತಾರೆ. ಆರೋಪಿ 2018 ಮೇ ಮಾಹೆಯಲ್ಲಿ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ಹೇಳಿರುತ್ತಾರೆ. ದೂರಿನಲ್ಲಿ 1 ತಿಂಗಳ ಒಳಗೆ ಹಣವನ್ನು ಮರುಪಾವತಿ ಮಾಡುತ್ತೇನೆ ಎಂದು ಆರೋಪಿ ಹೇಳಿರುತ್ತಾರೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಿಪಿ-03 ತಿಳುವಳಿಕೆ ಪತ್ರದಲ್ಲಿ 1 ತಿಂಗಳ ನಂತರ ಮರುಪಾವತಿ ಮಾಡಲು ಒಪ್ಪಿರುತ್ತಾರೆ ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

3) ಆರೋಪಿ ಶೇಕಡ 2 ರಷ್ಟು ಪಾವತಿ ಮಾಡುತ್ತೇನೆ ಎಂದು ತಿಳಿಸಿರುತ್ತಾರೆ. ನಾನು ಹಣಪಾವತಿ ಮಾಡಿದ ದಿನವೇ ನಿಪಿ-01 ಚೆಕ್ಕು ನೀಡಿರುತ್ತಾರೆ. ಆರೋಪಿ ಚೆಕ್ಕನ್ನು ತುಂಬಿಸಿ ಸಹಿ ಮಾಡಿಕೊಟ್ಟಿರುತ್ತಾರೆ. ಆರೋಪಿ ಆಂಗ್ಲಭಾಷೆಯಲ್ಲಿ ಸಹಿ ಮಾಡುತ್ತಾರೆ. ನನ್ನ ಸಮಕ್ಷಮ ಆರೋಪಿ ಚೆಕ್ಕನ್ನು ಬರೆದಿರುವುದಿಲ್ಲ. ಆರೋಪಿಗೆ ಹಣ ನೀಡಿದಾಗ ರವಿ ಎಂಬುವವರು ಇದ್ದರು. ನಾನು ಕಳುಹಿಸಿರುವ ತಿಳುವಳಿಕೆ ಪತ್ರ ಆರೋಪಿಗೆ ಜಾರಿಯಾಗಿರುತ್ತದೆ.

4) ಆರೋಪಿ ಕಾರ್ತಿಕ ರವರ ಬಳಿ ಒಂದು ದ್ವಿಚಕ್ರ ವಾಹನವನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ಸಹ ಹಾಜರಿದ್ದೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಹಣದ ಭದ್ರತೆಗಾಗಿ ನಿಪಿ-01 ಚೆಕ್ಕು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ರೂ. 15,000/- ಹಣದ ವಿಷಯವಾಗಿ ವಿವಾದ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ರೂ. 15,000/- ನನಗೆ ಆರೋಪಿ ಹಂತಹಂತವಾಗಿ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆರೋಪಿಯ ಬಳಿ ರೂ. 15,000/- ಜೊತೆಯಲ್ಲಿ ಬಡ್ಡಿ ಪಾವತಿ ಮಾಡುವಂತೆ ಬೇಡಿಕೆ ಇಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-01 ಚೆಕ್ಕನು ಕಾರ್ತಿಕ ರವರ

ಬಳಿ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ನಾನು ದುರುಪಯೋಗ ಪಡೆಸಿಕೊಂಡು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿ ನಗದು ರೂಪದಲ್ಲಿ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ